# ದ್ವಾದಶ ಜ್ಯೋತಿರ್ಲಿಂಗಗಳು

ಸ್ವಾಮಿ ವೀರೇಶಾನಂದ

ಸಮಗ್ರ ಭಾರತವನ್ನು ಒಂದುಗೂಡಿಸಿರುವ ಶಕ್ತಿಯೇ ಇಲ್ಲಿನ ಆಧ್ಯಾತ್ಮಿಕತೆ. ಇದರ ಮೂರ್ತರೂಪವೆಂಬಂತೆ, ಭರತಖಂಡದ ಎಲ್ಲ ಪ್ರದೇಶಗಳಲ್ಲಿ ವ್ಯಾಪಿಸಿಕೊಂಡಿರುವ ದ್ವಾದಶ ಜ್ಯೋತಿರ್ಲಿಂಗಗಳು ಭಾರತೀಯರ ಶ್ರದ್ಧೆ, ಭಕ್ತಿ, ಆಧ್ಯಾತ್ಮಿಕತೆಗಳ ದ್ಯೋತಕವಾಗಿವೆ. ಈ ವಿಷಯವನ್ನು ಕುರಿತು ಇಲ್ಲಿ ವಿವರಿಸುವ ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಪ್ರಸ್ತುತ ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಭಾ**ರತೀಯ ದೇವತೆಗಳಲ್ಲಿ ತ್ರಿಮೂರ್ತಿಗಳಿಗೆ ಮುಖ್ಯ ಸ್ಥಾನ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ – ಇವರು ಮೂವರು ತ್ರಿಮೂರ್ತಿಗಳು. ಇವರಲ್ಲಿ ಭೇದವನ್ನು ಮಾಡಬಾರದು ಎಂದು ಸಂಪ್ರದಾಯ ಹೇಳುತ್ತದೆ. ಆತ್ಯಂತಿಕ ಸತ್ಯ ಒಂದೇ; ಬ್ರಹ್ಮತತ್ತ್ವ ಒಂದೇ. ಈ ತತ್ತ್ವವೇ ಸೃಷ್ಟಿಕರ್ತನಾಗಿ ಚತುರ್ಮುಖ ಬ್ರಹ್ಮ ಎಂದು ಅನ್ನಿಸಿಕೊಳ್ಳುತ್ತದೆ. ಜಗತ್ತಿನ ಪಾಲನೆಯ ಕಾರ್ಯವನ್ನು ಮಾಡುವಾಗ ವಿಷ್ಣು ಎಂದು ಅನ್ನಿಸಿಕೊಳ್ಳುತ್ತದೆ. ಸೃಷ್ಟಿಯ ಸಂಹಾರ ಕಾರ್ಯವನ್ನು ಮಾಡಿದಾಗ, ರುದ್ರ ಅಥವಾ ಶಿವ ಎಂದು ಅನ್ನಿಸಿಕೊಳ್ಳುತ್ತದೆ. ಹೀಗಾಗಿ ಈ ಮೂರು ತ್ರಿಮೂರ್ತಿಗಳು ಪರತತ್ತ್ವದ ವಿಭಿನ್ನ ರೂಪಗಳು ಮಾತ್ರವೇ.

ತ್ರಿಮೂರ್ತಿಗಳಲ್ಲಿ ಭಗವಾನ್ ಶಂಕರ ಅಥವಾ ಶಿವನಿಗೆ ವಿಶೇಷ ಸ್ಥಾನವಿದೆ. ಶಂ ಅಂದರೆ ಮಂಗಳ. ಕರೋತಿ ಎಂದರೆ ಮಾಡುತ್ತಾನೆ ಎಂದರ್ಥ. ಮಂಗಳವನ್ನು ಉಂಟುಮಾಡುವುದರಿಂದ ಶಿವನಿಗೆ ಶಂಕರ ಎಂದು ಹೆಸರು. ಶಿವ ಎಂದರೂ ಕೂಡ ಮಂಗಳ ಎಂದೇ ಅರ್ಥ. ಶಿವನ ಸ್ವರೂಪವೇ ಮಂಗಳರೂಪ. ಶಿವನನ್ನು ಲಿಂಗರೂಪದಲ್ಲಿ ಪೂಜಿಸುವುದು ರೂಢಿ. ಅಂಥ ಶಿವದೇವಸ್ಥಾನಗಳನ್ನು ಭಾರತದ ಉದ್ದಗಲಕ್ಕೂ ಕಾಣುತ್ತೇವೆ. ಆದರೆ ಅವುಗಳಲ್ಲಿ ಹನ್ನೆರಡು ಪ್ರಸಿದ್ಧ ದೇವಸ್ಥಾನಗಳಲ್ಲಿ ಪೂಜಿಸಲ್ಪಡುವ ಲಿಂಗವನ್ನು ಜ್ಯೋತಿರ್ಲಿಂಗ ಎಂದು ಕರೆಯುತ್ತಾರೆ.

ಜ್ಯೋತಿ ಎಂದರೆ ಬೆಳಕು ಎಂದರ್ಥ. ಲಿಂಗ ಎಂದರೆ ಸಂಸ್ಕೃತದಲ್ಲಿ ಸಂಕೇತ ಎಂದರ್ಥ. ಹೀಗಾಗಿ ಜ್ಯೋತಿರ್ಲಿಂಗವು ಬೆಳಕಿನ ಸಂಕೇತ. ಇಲ್ಲಿ ಬೆಳಕು ಎಂದರೆ ಸಾಧಾರಣ ಬೆಳಕಲ್ಲ. ಜ್ಯೋತಿಗಳಿಗೂ ಜ್ಯೋತಿಯಾದ ಪರಮಾತ್ಮ ಜ್ಯೋತಿ; ಅಖಂಡ ಜ್ಯೋತಿ; ಚೈತನ್ಯಜ್ಯೋತಿ. ಭಗವಾನ್ ಶಿವನು ಪರಮಾತ್ಮ ಜ್ಯೋತಿಯ ಒಂದು ಅದ್ಭುತ ರೂಪ. ಹೀಗಾಗಿ ಆತನ ಸಂಕೇತವನ್ನು ಜ್ಯೋತಿರ್ಲಿಂಗ ಎಂದು ಕರೆಯಲಾಗುತ್ತದೆ.

ಶಿವಪುರಾಣವು ಹೇಳುವಂತೆ ಭಾರತ ಮತ್ತು ನೇಪಾಳಗಳಲ್ಲಿ ೬೪ ಜ್ಯೋತಿರ್ಲಿಂಗಗಳಿವೆ. ಆದರೆ ಅವುಗಳಲ್ಲಿ ೧೨ ಜ್ಯೋತಿರ್ಲಿಂಗಗಳು ಮಹಾ ಜ್ಯೋತಿರ್ಲಿಂಗಗಳು ಎಂದು ಪರಿಗಣಿಸಲ್ಪಟ್ಟಿವೆ. ಈ ಜ್ಯೋತಿರ್ಲಿಂಗಗಳು ಉತ್ತರ ಭಾರತದ ಹಿಮಾಲಯ ಪರ್ವತದಲ್ಲಿ ಇರುವ ಕೇದಾರನಾಥದಿಂದ ದಕ್ಷಿಣ ಭಾರತದ ತುದಿಯಲ್ಲಿ ಇರುವ ರಾಮೇಶ್ವರದವರೆಗೂ ಹರಡಿವೆ. ಹೀಗಾಗಿ ಪ್ರಾಚೀನ ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಐಕ್ಯತೆಯ ಪ್ರತೀಕಗಳಾಗಿಯೂ ಇವುಗಳನ್ನು ಪರಿಗಣಿಸಬಹುದು.

ಎಲ್ಲ ಜ್ಯೋತಿರ್ಲಿಂಗಗಳನ್ನು ಹೆಸರಿಸುವ ಕೆಳಗಿನ ಸಾಂಪ್ರದಾಯಿಕ ಶ್ಲೋಕಗಳು ಪ್ರಸಿದ್ಧವಾಗಿವೆ:

**ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್ ।**
**ಉಜ್ಜಯಿನ್ಯಾಂ ಮಹಾಕಾಲಮೋಂಕಾರಮಮಲೇಶ್ವರಮ್ ॥**
**ವೈದ್ಯನಾಥಂ ಚಿತಾಭೂಮೌ ಚ ಡಾಕಿನ್ಯಾಂ ಭೀಮಾಶಂಕರಮ್ ।**
**ಸೇತುಬಂಧೇ ತು ರಾಮೇಶಂ ನಾಗೇಶಂ ದಾರುಕಾವನೇ ॥**
**ವಾರಾಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀತಟೇ ।**
**ಹಿಮಾಲಯೇ ತು ಕೇದಾರಂ ಘುಸೃಣೇಶಂ ಶಿವಾಲಯೇ ॥**
**ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ ।**
**ಸಪ್ತ ಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥**

### ಸೋಮನಾಥ ಜ್ಯೋತಿರ್ಲಿಂಗ, ಗುಜರಾತ್

ಈ ಲಿಂಗವನ್ನು ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದು ಎಂದು ಪರಿಗಣಿಸಲಾಗಿದೆ. ಇದು ಗುಜರಾತಿನ ಕಾಥೈವಾಡ ಜಿಲ್ಲೆಯಲ್ಲಿ ವೇರಾವಲ್ ಅಥವಾ ಪ್ರಭಾಸ ಕ್ಷೇತ್ರದ ಬಳಿಯಲ್ಲಿ, ಸಮುದ್ರತೀರದಲ್ಲಿದೆ. ಶಿವಪುರಾಣದ ಪ್ರಕಾರ, ಚಂದ್ರನು ದಕ್ಷ ಪ್ರಜಾಪತಿಯ ೨೭ ಪುತ್ರಿಯರನ್ನು ಮದುವೆಯಾದನು. ಅವರಲ್ಲೆಲ್ಲಾ ರೋಹಿಣಿ ಎನ್ನುವವಳನ್ನು ಚಂದ್ರನು ಬಹಳವಾಗಿ ಪ್ರೀತಿಸುತ್ತಿದ್ದನು. ಇತರ ಪತ್ನಿಯರನ್ನು ಕಡೆಗಣಿಸಿದನು. ಇದನ್ನು ಕಂಡು



ತಂದೆಯಾದ ದಕ್ಷಪ್ರಜಾಪತಿಗೆ ಬಹಳ ಕೋಪ ಬಂತು. 'ನಿನ್ನ ಪ್ರಭೆಯು ನಷ್ಟವಾಗಲಿ' ಎಂದು ಚಂದ್ರನಿಗೆ ಅವನು ಶಾಪ ಕೊಟ್ಟನು. ಮಾನಸಿಕವಾಗಿ ಸಂತಪ್ತನಾದ ಚಂದ್ರನು ಭಗವಾನ್ ಶಿವನ ಈ ದೇವಸ್ಥಾನಕ್ಕೆ ಬಂದನು. ಇಲ್ಲಿ ಪಶುಪತಿಯನ್ನು ಭಕ್ತಿಯಿಂದ ಪೂಜಿಸಿದನು. ಚಂದ್ರನ ಭಕ್ತಿ ಮತ್ತು ತಪಸ್ಸಿಗೆ ಶಿವನು ಸಂತೋಷಗೊಂಡನು. ಅವನ ತೇಜಸ್ಸನ್ನು ಮತ್ತು ಪ್ರಭೆಯನ್ನು ಮತ್ತೆ ತಿರುಗಿ ಗಳಿಸಿಕೊಟ್ಟನು. ಹೀಗೆ ಈ ಶಿವಲಿಂಗವು ಸೋಮನಾಥ ಎಂದು ಪ್ರಸಿದ್ಧವಾಯಿತು. ಸೋಮ ಎಂದರೆ ಚಂದ್ರ. ನಾಥ ಎಂದರೆ ಒಡೆಯ.

ಐತಿಹಾಸಿಕವಾಗಿಯೂ ಸೋಮನಾಥ ಮಂದಿರವು ಪ್ರಸಿದ್ಧವಾಗಿದೆ. ಇದರ ಮೊದಲ ದೇವಸ್ಥಾನವು ೨೦೦೦ ವರ್ಷಗಳ ಹಿಂದೆಯೇ ಇತ್ತು. ಕ್ರಿ.ಶ.೬೪೯ರಂದು ರಾಜ ಮೈತ್ರನೆಂಬುವವನು ಎರಡನೆಯ ದೇಗುಲವನ್ನು ನಿರ್ಮಾಣಮಾಡಿದನು. ಕ್ರಿ.ಶ. ೭೨೫ರಲ್ಲಿ ಸಿಂಧ್ ದೇಶದ ರಾಜನು ಇದರ ಮೇಲೆ ದಾಳಿಯನ್ನು ಮಾಡಿ, ಮಂದಿರವನ್ನು ಸಂಪೂರ್ಣವಾಗಿ ನಾಶಮಾಡಿದನು. ಕ್ರಿ.ಶ. ೮೧೫ರಲ್ಲಿ ಮೂರನೆಯ ಸಲ ಮೂರನೆಯ ನಾಗಭಟ್ಟನೆಂಬ ರಾಜನು ಕೆಂಪುಗಲ್ಲಿನಲ್ಲಿ ಭವ್ಯ ಮಂದಿರವನ್ನು ನಿರ್ಮಾಣ ಮಾಡಿದನು. ಕ್ರಿ.ಶ. ೧೦೨೬ರಲ್ಲಿ , ಮುಹಮ್ಮದ್ ಘಜ್ನಿಯು ಸೋಮನಾಥ ದೇವಾಲಯದ ಅಮೂಲ್ಯ ಆಭರಣಗಳು ಮತ್ತು ಸಂಪತ್ತುಗಳನ್ನು ಅಪಹರಿಸಿದನು. ಅಲ್ಲಿ ನೆರೆದಿದ್ದ ಅಸಂಖ್ಯ ತೀರ್ಥಯಾತ್ರಿಗಳನ್ನು ಕೊಂದುಹಾಕಿದನು. ದೇವಸ್ಥಾನದ ಕಟ್ಟಡವನ್ನು ಸಂಪೂರ್ಣವಾಗಿ ಸುಟ್ಟುಹಾಕಿ, ವಿನಾಶಗೊಳಿಸಿದನು. ತದನಂತರ, ಕ್ರಿ.ಶ. ೧೦೨೬ರಿಂದ ೧೦೪೨ರ ವರೆಗೆ ಸೋಲಂಕಿ ರಾಜವಂಶದ ರಾಜ ಭೀಮದೇವನು ನಾಲ್ಕನೆಯ ಮಂದಿರವನ್ನು ಕಟ್ಟಿಸಿದನು. ಸೋಮನಾಥ ಮಂದಿರವನ್ನು ದೆಹಲಿ ಸುಲ್ತಾನರು ೧೨೯೯ರಲ್ಲಿ ಮತ್ತೆ ಧ್ವಂಸ ಮಾಡಿದರು. ಇದಲ್ಲದೆ ೧೩೯೪ರಲ್ಲಿಯೂ ಅದನ್ನು ಮತ್ತೊಮ್ಮೆ ನಾಶ ಮಾಡಲಾಯಿತು. ಕಡೆಯದಾಗಿ ೧೭೦೬ರಲ್ಲಿ ಮೊಗಲ ದೊರೆಯಾದ ಔರಂಗಜೇಬನು ಮಂದಿರವನ್ನು ಸಂಪೂರ್ಣ ಕೆಡವಿಬಿಟ್ಟನು. ಆಧುನಿಕ ಯುಗದಲ್ಲಿ ಈ ಸೋಮನಾಥ ಮಂದಿರವನ್ನು ಪುನಃ ನಿರ್ಮಾಣ ಮಾಡಿದ ಕೀರ್ತಿಯು ಭಾರತದ ಪ್ರಥಮ ಉಪಪ್ರಧಾನಮಂತ್ರಿಗಳಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಸೇರುತ್ತದೆ. ೧೯೫೧ರಲ್ಲಿ ಭಾರತದ ಪ್ರಥಮ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ್ ಅವರು ಈ ಪುಣ್ಯಕಾರ್ಯಕ್ಕೆ ಶುಭಾರಂಭವನ್ನು ಮಾಡಿದರು. ಡಿಸೆಂಬರ್ ೧, ೧೯೯೫ರಂದು ಅಂದಿನ ರಾಷ್ಟ್ರಾಧ್ಯಕ್ಷರಾದ ಡಾ.ಶಂಕರ ದಯಾಲ್ ಶರ್ಮ ಅವರು ಸೋಮನಾಥನ ಭವ್ಯಮಂದಿರವನ್ನು ದೇಶಕ್ಕೆ ಸಮರ್ಪಿಸಿದರು. ಈ ಸೋಮನಾಥ ಮಂದಿರವು ಸನಾತನ ಧರ್ಮದ ಚಿರಂತನತೆಯ ಸಂಕೇತವಾಗಿದೆ.

## ಮಲ್ಲಿಕಾರ್ಜುನ ಜ್ಯೋತಿರ್ಲಿಂಗ, ಶ್ರೀಶೈಲ, ಆಂಧ್ರಪ್ರದೇಶ

ಮಲ್ಲಿಕಾರ್ಜುನ ದೇವಾಲಯವು ಆಂಧ್ರಪ್ರದೇಶದ ದಕ್ಷಿಣ ಭಾಗದಲ್ಲಿ ಇರುವ ಕೃಷ್ಣಾ ನದಿಯ ದಡದಲ್ಲಿರುವ ಶ್ರೀಶೈಲ



ಪರ್ವತದಲ್ಲಿ ವಿರಾಜಮಾನವಾಗಿದೆ. ಇದು ದಕ್ಷಿಣಭಾರತದಲ್ಲಿ ಅತ್ಯಂತ ಪ್ರಸಿದ್ಧವಾದ ಶಿವಮಂದಿರ. ಇದನ್ನು ದಕ್ಷಿಣದ ಕಾಶಿಯೆಂದೇ ಕರೆಯುತ್ತಾರೆ. ಶೈವ ಮತ್ತು ವೀರಶೈವ ಪಂಗಡಗಳ ಭಕ್ತರಿಗೆ ಪವಿತ್ರವಾದ ಸ್ಥಳ ಇದು. ಮಲ್ಲಿಕಾರ್ಜುನ ಶಿವ ಮತ್ತು ಭ್ರಮರಾಂಬಾ ದೇವಿಯರು ಇಲ್ಲಿನ ಸ್ಥಳದೇವತೆಗಳು. ಶಿವ ಪುರಾಣದ ಪ್ರಕಾರ, ಒಮ್ಮೆ ಕಾರ್ತಿಕೇಯನು ತನ್ನ ತಂದೆತಾಯಿಗಳಾದ ಶಿವಪಾರ್ವತಿಯರ ಮೇಲೆ ಕೋಪಗೊಂಡನು. ಕ್ರೌಂಚ ಪರ್ವತಕ್ಕೆ ಹೊರಟುಹೋದನು. ದೇವತೆಗಳೆಲ್ಲ ಸೇರಿ ಅವನನ್ನು ಸಮಾಧಾನಪಡಿಸಲು ಯತ್ನಿಸಿದರು. ಶಿವಪಾರ್ವತಿಯರೇ ಅಲ್ಲಿಗೆ ಹೋಗಿ ತಮ್ಮ ಸುಪುತ್ರನನ್ನು ಸಾಂತ್ವನಗೊಳಿಸಿದರು. ಇಷ್ಟಾದರೂ ಕಾರ್ತಿಕೇಯನ ಕೋಪವು ತಣಿಯಲಿಲ್ಲ. ಅವರು ಕೂಡ ಹಿಂತಿರುಗಿ ಬರಬೇಕಾಯಿತು. ತಮ್ಮ ಮಗನ ಈ ಸ್ಥಿತಿಯನ್ನು ನೋಡಿ, ತಂದೆತಾಯಿಗಳಿಬ್ಬರೂ ಬಹಳ ಸಂತಪ್ತರಾದರು. ಶಿವನು ಆಗ ಜ್ಯೋತಿರ್ಲಿಂಗದ ರೂಪವನ್ನು ತಾಳಿದನು. ಅದೇ ಬೆಟ್ಟದಲ್ಲಿ ಮಲ್ಲಿಕಾರ್ಜುನ ಎಂಬ ಹೆಸರಿನಿಂದ ನೆಲೆಸಿದನು. ಮಲ್ಲಿಕಾ ಎಂದರೆ ಪಾರ್ವತಿ. ಅರ್ಜುನ ಎಂದರೆ ಶಿವನ ಒಂದು ಹೆಸರು. ಈ ಶಿವಸ್ವರೂಪವನ್ನು ದರ್ಶಿಸುವುದರಿಂದ ಎಲ್ಲ ಪಾಪಗಳು ನಿವಾರಣೆಯಾಗುತ್ತವೆ; ಸಂಸಾರದಿಂದ ಮೋಕ್ಷ ಸಿಗುತ್ತದೆ ಎನ್ನುವ ನಂಬಿಕೆಯು ಭಕ್ತಜನರಲ್ಲಿ ಇದೆ.

## ಮಹಾಕಾಲೇಶ್ವರ ಜ್ಯೋತಿರ್ಲಿಂಗ, ಉಜ್ಜೈನಿ, ಮಧ್ಯಪ್ರದೇಶ

ಉಜ್ಜೈನಿಯ ಮಹಾಕಾಲ ಮಂದಿರವು ಹಿಂದೆ ದಟ್ಟ ಕಾಡಿನ ಮಧ್ಯದಲ್ಲಿ ಇತ್ತು. ಶಿಪ್ರಾ ನದಿಯ ದಡದಲ್ಲಿ ದೇವಸ್ಥಾನವು ವಿರಾಜಮಾನವಾಗಿದೆ. ಇದು ಮಧ್ಯಪ್ರದೇಶದ ಬಹು ಮುಖ್ಯವಾದ ತೀರ್ಥಕ್ಷೇತ್ರ. ಈ ಜ್ಯೋತಿರ್ಲಿಂಗದ ಬಗ್ಗೆ ಹಲವಾರು ಕಥೆಗಳು ಇವೆ. ಪುರಾಣಗಳ ಪ್ರಕಾರ, ಉಜ್ಜೈನಿಯಲ್ಲಿ ಚಂದ್ರಸೇನ ಎಂಬ ರಾಜನು ಆಳುತ್ತಿದ್ದನು. ಅವನು ಮಹಾ ಶಿವಭಕ್ತ. ಅವನ ಉತ್ಕಟ ಶಿವಭಕ್ತಿಯನ್ನು ಕಂಡು ಶ್ರೀಕರ ಎನ್ನುವ ಬಾಲಕನು ಬಹಳ ಪ್ರಭಾವಿತನಾದನು. ಒಂದು ಕಲ್ಲನ್ನು ತೆಗೆದುಕೊಂಡು ಅದನ್ನೇ ಶಿವನೆಂದು ಭಾವಿಸಿ ಪೂಜಿಸಲಾರಂಭಿಸಿದನು. ಬಹಳ ಜನರು ಅವನನ್ನು ತಡೆಯಲು ಯತ್ನಿಸಿದರು. ಆದರೆ ಅವನ ಭಕ್ತಿ ಹೆಚ್ಚಾಗುತ್ತಲೇ ಹೋಯಿತು. ಈತನ ಭಕ್ತಿಗೆ ಸುಪ್ರೀತನಾಗಿ ಭಗವಾನ್ ಶಿವನು ಜ್ಯೋತಿರ್ಲಿಂಗದ ರೂಪವನ್ನು ತಾಳಿದನು. ಮಹಾಕಾಲ ಅರಣ್ಯದಲ್ಲಿ ನೆಲೆಸಿದನು. ಇನ್ನೊಂದು ಬಗೆಯಲ್ಲಿಯೂ ಭಕ್ತರಿಗೆ ಮಹಾಕಾಲೇಶ್ವರ ದೇವಸ್ಥಾನವು ಪವಿತ್ರವಾಗಿದೆ. ಈ



ಕ್ಷೇತ್ರವು ಏಳು ಮುಕ್ತಿಸ್ಥಳಗಳಲ್ಲಿ ಒಂದಾಗಿದೆ. ಇದನ್ನು ಸಂದರ್ಶಿಸಿದ ಭಕ್ತರಿಗೆ ಮುಕ್ತಿಯುಂಟಾಗುವುದು ಎಂಬ ನಂಬಿಕೆ ಇದೆ.

### ಓಂಕಾರೇಶ್ವರ ಜ್ಯೋತಿರ್ಲಿಂಗ, ಓಂಕಾರೇಶ್ವರ, ಮಧ್ಯಪ್ರದೇಶ

ಮಧ್ಯಪ್ರದೇಶದಲ್ಲಿ ನರ್ಮದಾ ನದಿಯು ಹರಿಯುತ್ತದೆ. ಅಲ್ಲಿ ಒಂದು ಸಣ್ಣದ್ವೀಪ. ಇದನ್ನು ಶಿವಪುರಿ ಎನ್ನುತ್ತಾರೆ. ಇಲ್ಲಿ ಅತ್ಯಂತ ಪವಿತ್ರವಾದ ಓಂಕಾರೇಶ್ವರ ಲಿಂಗವು ವಿರಾಜಮಾನವಾಗಿದೆ. ಓಂಕಾರವು ಪವಿತ್ರವಾದ ಶಬ್ದವಾಗಿದೆ. ಅದರ ಒಡೆಯನೇ ಓಂಕಾರೇಶ್ವರ. ಹಿಂದೂ ಶಾಸ್ತ್ರಗಳ ಪ್ರಕಾರ, ದೇವತೆಗಳಿಗೂ ದಾನವರಿಗೂ ಮಹಾನ್ ಯುದ್ಧ ಆರಂಭವಾಯಿತು. ಇದರಲ್ಲಿ ದಾನವರು ವಿಜೇತರಾದರು. ದೇವತೆಗಳಿಗೆ ಸೋಲಾಯಿತು; ಅವರಿಗೆ ಮುಖಭಂಗವಾಯಿತು. ಅವರು ಭಗವಾನ್ ಶಿವನನ್ನು ಪ್ರಾರ್ಥಿಸಿದರು. ಈ ಪ್ರಾರ್ಥನೆಯನ್ನು ಮನ್ನಿಸಿದ ಭಗವಾನ್ ಶಿವನು ಓಂಕಾರೇಶ್ವರ ಜ್ಯೋತಿರ್ಲಿಂಗವಾಗಿ ಕಾಣಿಸಿಕೊಂಡನು. ಇದನ್ನು ದೇವತೆಗಳು ಆರಾಧಿಸಿದರು. ಇನ್ನೊಂದು ಯುದ್ಧದಲ್ಲಿ ದಾನವರನ್ನು ಸೋಲಿಸಿದರು. ಈ ಓಂಕಾರೇಶ್ವರ ಪ್ರದೇಶದಲ್ಲಿಯೇ ಶ್ರೀಶಂಕರಾಚಾರ್ಯರ ಗುರುಗಳಾದ ಗೋವಿಂದ ಭಗವತ್ಪಾದರ ಆಶ್ರಮವಿತ್ತು. ಅವರು ಶ್ರೀಶಂಕರರಿಗೆ ಸಂನ್ಯಾಸ ದೀಕ್ಷೆ ಕೊಟ್ಟ ಜಾಗ ಇದೇ ಎನ್ನುತ್ತಾರೆ. ಅದರ ಕುರುಹಾಗಿ ಒಂದು ಗುಹೆಯೂ ಕೂಡ ನರ್ಮದಾ ನದಿಯ ತಟದಲ್ಲಿ ಇದೆ.



### ವೈದ್ಯನಾಥ ಜ್ಯೋತಿರ್ಲಿಂಗ, ದೇವಘರ, ಝಾರ್‌ಖಂಡ್

ಈ ಜ್ಯೋತಿರ್ಲಿಂಗವು ಝಾರ್‌ಖಂಡ್ ರಾಜ್ಯದ ಸಂತಾಲ ಪರಗಣ ಪ್ರದೇಶದ ದೇವಘರ್ ಎಂಬ ಊರಿನಲ್ಲಿದೆ. ಇಲ್ಲಿನ ಪುರಾಣ ಐತಿಹ್ಯದಂತೆ, ದಾನವರಾಜನಾದ ರಾವಣನು ತಪಸ್ಸು ಮಾಡಿದನು. ಶಿವನನ್ನು ಒಲಿಸಿಕೊಂಡನು. ಶ್ರೀಲಂಕಾ ದೇಶಕ್ಕೆ ಬಂದು, ಅದನ್ನು ಅಭೇದ್ಯವನ್ನಾಗಿ ಮಾಡೆಂದು ಪ್ರಾರ್ಥಿಸಿದನು. ಇದಲ್ಲದೆ, ಕೈಲಾಸ ಪರ್ವತವನ್ನೇ ಎತ್ತಿಕೊಂಡು, ಶ್ರೀಲಂಕೆಗೆ ಒಯ್ಯಲು ಪ್ರಯತ್ನಿಸಿದನು. ಶಿವನು ಇದನ್ನು ವಿಫಲಗೊಳಿಸಿದನು. ಅದಕ್ಕೆ ಪ್ರತಿಯಾಗಿ, ತನ್ನ ಜ್ಯೋತಿರ್ಲಿಂಗವನ್ನೇ ಅವನಿಗೆ



ಕೊಟ್ಟನು. ಇದನ್ನು ನೆಲದಲ್ಲಿ ಇಟ್ಟರೆ ಅದು ಅಲ್ಲಿಯೇ ಸ್ಥಾಪಿತವಾಗುವುದು ಎಂದು ಎಚ್ಚರಿಕೆಯನ್ನೂ ಕೊಟ್ಟನು. ರಾವಣನು ಶ್ರೀಲಂಕೆಗೆ ಈ ಲಿಂಗವನ್ನು ತೆಗೆದುಕೊಂಡು ಹೋಗುತ್ತಿದ್ದನು. ಇದೇ ಸಮಯದಲ್ಲಿ ವರುಣದೇವನು ರಾವಣನ ದೇಹವನ್ನು ಪ್ರವೇಶ ಮಾಡಿದನು. ಆದ್ದರಿಂದ ರಾವಣನಿಗೆ ಬಹಿರ್ದೆಸೆಗೆ ಹೋಗುವ ತವಕವಾಯಿತು. ಅಲ್ಲೊಬ್ಬ ಬಾಲಕ ಕಂಡು ಬಂದನು. ಅವನು ವಿಷ್ಣುವಲ್ಲದೆ ಬೇರಲ್ಲ. ಬಾಲಕನ ರೂಪದಲ್ಲಿದ್ದ ಕಪಟವೇಷಧಾರಿಯಾದ ವಿಷ್ಣುವು ಲಿಂಗವನ್ನು ಹಿಡಿದುಕೊಳ್ಳಲು ಒಪ್ಪಿದನು. ರಾವಣನು ಅತ್ತ ನಡೆದ ಒಡನೆ, ಇತ್ತ ವಿಷ್ಣುವು ಲಿಂಗವನ್ನು ನೆಲದ ಮೇಲೆ ಇಟ್ಟುಬಿಟ್ಟನು. ಅದು ಅಲ್ಲಿಯೇ ಬೇರೂರಿತು. ತನ್ನ ತಪಸ್ಸಿನ ಅಂಗವಾಗಿ, ರಾವಣನು ತನ್ನ ಒಂಭತ್ತು ತಲೆಗಳನ್ನು ಕಡಿದುಕೊಂಡನು. ಕರುಣಾಳುವಾದ ಶಿವನು ಅವುಗಳನ್ನು ಮರುಕಳಿಸಿದನು. ಅಂದರೆ ಶಿವನು ಒಬ್ಬ ವೈದ್ಯನಾದನು. ಹೀಗಾಗಿ ಈ ಜ್ಯೋತಿರ್ಲಿಂಗವನ್ನು ವೈದ್ಯನಾಥ ಎಂದು ಕರೆಯುತ್ತಾರೆ.

## ಭೀಮಾಶಂಕರ, ಮಹಾರಾಷ್ಟ್ರ

ಭೀಮಾಶಂಕರ ದೇವಸ್ಥಾನವು ಪುಣೆಯ ಹತ್ತಿರವಿರುವ ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿದೆ. ಇದು ಭೀಮಾನದಿಯ ಉಗಮಸ್ಥಾನದ ದಂಡೆಯಲ್ಲಿದೆ. ಒಂದು ಪುರಾಣಕತೆಯ ಪ್ರಕಾರ, ಭೀಮನೆಂಬ ಹೆಸರಿನ ರಾಕ್ಷಸನು ಕುಂಭಕರ್ಣನ ಮಗ. ತನ್ನ ತಂದೆಯನ್ನು ಭಗವಾನ್ ವಿಷ್ಣುವು ರಾಮನ ಅವತಾರದಲ್ಲಿ ಕೊಂದನು ಎಂದು ತಿಳಿದ ಭೀಮನು ಕೋಪಗೊಂಡನು. ಅವನು ಬ್ರಹ್ಮನನ್ನು ಕುರಿತು ತಪಸ್ಸನ್ನು ಮಾಡಿ, ಅಗಾಧಶಕ್ತಿಯನ್ನು ಪಡೆದುಕೊಂಡನು. ನಂತರ ಇಡೀ ಜಗತ್ತನ್ನು ಅಲ್ಲೋಲಕಲ್ಲೋಲ ಮಾಡಿದನು. ಕಾಮರೂಪೇ



ಶ್ವರನೆಂಬ ಉತ್ಕಟ ಶಿವಭಕ್ತನನ್ನು ಸೋಲಿಸಿದನು. ಅವನನ್ನು ಕಾರಾಗೃಹದಲ್ಲಿ ನೂಕಿದನು. ಇದನ್ನು ಕಂಡು ದೇವತೆಗಳು ಕೋಪಗೊಂಡರು. ಶಿವನಿಗೆ ಅವತಾರಮಾಡುವಂತೆ ಕೇಳಿಕೊಂಡರು. ಈ ದಬ್ಬಾಳಿಕೆಯನ್ನು ನಿಲ್ಲಿಸುವಂತೆ ಬೇಡಿಕೊಂಡರು. ಶಿವ ಮತ್ತು ಭೀಮನ ನಡುವೆ ಯುದ್ಧ ಆರಂಭವಾಯಿತು. ಶಿವನು ರಕ್ಕಸನಾದ ಭೀಮನನ್ನು ಸುಟ್ಟು ಬೂದಿ ಮಾಡಿಬಿಟ್ಟನು. ಎಲ್ಲ ದೇವತೆಗಳೂ ಕೂಡ, ಅಲ್ಲಿಯೇ ನೆಲೆಸುವಂತೆ ಶಿವನನ್ನು ಕೇಳಿಕೊಂಡರು. ಶಿವನು ಭೀಮಾಶಂಕರವೆಂಬ ಜ್ಯೋತಿರ್ಲಿಂಗದ ರೂಪದಲ್ಲಿ ಸ್ಥಾಪಿತನಾದನು. ಶಿವನು ಯುದ್ಧಮಾಡಿದಾಗ ಹರಿದ ಬೆವರು ಭೀಮಾನದಿಯಾಗಿ ಹರಿಯಿತು ಎಂದು ಭಕ್ತರು ನಂಬುತ್ತಾರೆ.

## ರಾಮೇಶ್ವರ ಜ್ಯೋತಿರ್ಲಿಂಗ, ತಮಿಳುನಾಡು

ಜ್ಯೋತಿರ್ಲಿಂಗಗಳೆಲ್ಲ ದಕ್ಷಿಣದ ತುದಿಯಲ್ಲಿರುವ ದೇವಸ್ಥಾನವೆಂದರೆ ರಾಮೇಶ್ವರ. ರಾಮೇಶ್ವರವು ಸಮುದ್ರದ ನಡುಗಡ್ಡೆಯಲ್ಲಿದೆ. ಈ ದೇವಸ್ಥಾನವು ತನ್ನ ಶಿಲ್ಪಕಲಾ ವೈಭವಕ್ಕೆ ಪ್ರಸಿದ್ಧವಾಗಿದೆ. ಅನೇಕ ಕಲ್ಲಿನ ಸಭಾಂಗಣಗಳು, ಗೋಪುರಗಳು ಮತ್ತು ೩೬ ತೀರ್ಥಗಳನ್ನು ಈ ದೇವಸ್ಥಾನವು ಒಳಗೊಂಡಿದೆ. ಇದು ದಕ್ಷಿಣದ ಕಾಶಿಯೆಂದು ಪ್ರಸಿದ್ಧವಾದ ತೀರ್ಥಕ್ಷೇತ್ರ. ಈ ದೇವಸ್ಥಾನವು ರಾಮಾಯಣದ ಸಂಬಂಧ ಹೊಂದಿದೆ. ರಾಮನು ಶ್ರೀಲಂಕೆಗೆ ಹೋಗುವಾಗ ಮಾರ್ಗಮಧ್ಯದಲ್ಲಿ ರಾಮೇಶ್ವರ ಕ್ಷೇತ್ರದಲ್ಲಿ ಬೀಡುಬಿಟ್ಟನು. ಅಲ್ಲಿ ನೀರನ್ನು ಕುಡಿಯುತ್ತಿದ್ದನು. ಆಗ ಒಂದು ದಿವ್ಯವಾಣಿ ಕೇಳಿಸಿತು: 'ನನ್ನನ್ನು ಪೂಜೆ ಮಾಡದೆ ನೀರನ್ನು ಕುಡಿಯುತ್ತಿದ್ದೀಯೆ.' ಇದನ್ನು ಕೇಳಿದ ರಾಮನು, ಸಮುದ್ರದ ಮರಳಿ



ನಲ್ಲಿಯೇ ಒಂದು ಲಿಂಗವನ್ನು ರಚಿಸಿದನು. ಅದನ್ನು ಪೂಜಿಸಿದನು. ರಾವಣನನ್ನು ಕೊಲ್ಲಲು ಪರಮೇಶ್ವರನ ಅನುಗ್ರಹವನ್ನು ಯಾಚಿಸಿದನು. ಶಿವನ ಪರಮಾನುಗ್ರಹವಾಯಿತು. ಮುಂದೆ ಶ್ರೀಲಂಕೆಗೆ ಹೋಗಿ, ರಾವಣನನ್ನು ಮರ್ದಿಸಿದನು. ಭಗವಾನ್ ಶಿವನು ರಾಮೇಶ್ವರದಲ್ಲಿಯೇ ಜ್ಯೋತಿರ್ಲಿಂಗದ ರೂಪದಲ್ಲಿ ನೆಲೆಸಿದನು.

## ನಾಗೇಶ್ವರ ಜ್ಯೋತಿರ್ಲಿಂಗ, ಗುಜರಾತ್

ನಾಗೇಶ್ವರ ಜ್ಯೋತಿರ್ಲಿಂಗವು ದ್ವಾರಕಾ ಮತ್ತು ಬೇಟ್ ದ್ವಾರಕೆಗಳಿಗೆ ಹೋಗುವ ದಾರಿಯ ಮಧ್ಯದಲ್ಲಿದೆ. ಸೌರಾಷ್ಟ್ರ ಪ್ರದೇಶದ ಸಮುದ್ರದ ದಂಡೆಯಲ್ಲಿದೆ. ಈ ಲಿಂಗದ ದರ್ಶನವನ್ನು ಮಾಡಿದರೆ ಎಲ್ಲ ರೀತಿಯ ವಿಷಸೇವನೆಯಿಂದ ರಕ್ಷಿಸಿಕೊಳ್ಳಬಹುದು ಎಂದು ಭಕ್ತರು ನಂಬುತ್ತಾರೆ. ಶಿವಪುರಾಣದ ಪ್ರಕಾರ, ಸುಪ್ರಿಯ ಎಂಬ ಶಿವಭಕ್ತನನ್ನು ದಾರುಕ ಎಂಬ ರಾಕ್ಷಸನು ತನ್ನ ರಾಜಧಾನಿಯಾದ ದಾರುಕಾವನದಲ್ಲಿ ಬಂಧಿಸಿ ಇಟ್ಟಿದ್ದನು. ಇವನ ಜೊತೆಗೆ ಹಲವಾರು ಜನರನ್ನೂ ಅವನು ಸೆರೆಮನೆಯಲ್ಲಿ ಇಟ್ಟಿದ್ದನು. ಸುಪ್ರಿಯನು ಎಲ್ಲ ಬಂಧಿತರಿಗೂ 'ಓಂ ನಮಃ ಶಿವಾಯ' ಎಂದು ಉಚ್ಚರಿಸುವಂತೆ ಕೇಳಿಕೊಳ್ಳುತ್ತಾನೆ. ಇದರಿಂದ ಕ್ರುದ್ಧಗೊಂಡ ದಾರುಕನು ಸುಪ್ರಿಯನನ್ನು ಕೊಲ್ಲುತ್ತಾನೆ. ಆ ಸಮಯದಲ್ಲಿ ಭಗವಾನ್ ಶಿವನು ಆ ರಾಕ್ಷಸನ ಮುಂದೆ ಕಾಣಿಸಿಕೊಳ್ಳುತ್ತಾನೆ. ಆತನನ್ನು ಸಂಹಾರಮಾಡುತ್ತಾನೆ. ಅಲ್ಲಿಯೇ ಜ್ಯೋತಿರ್ಲಿಂಗ ರೂಪದಲ್ಲಿ ನೆಲೆಸುತ್ತಾನೆ.



### ಕಾಶಿ ವಿಶ್ವನಾಥ, ವಾರಾಣಸಿ

ವಾರಾಣಸಿಯನ್ನು ಜಗತ್ತಿನಲ್ಲಿಯೇ ಅತ್ಯಂತ ಪವಿತ್ರವಾದ ಪುಣ್ಯಕ್ಷೇತ್ರ ಎಂದು ಹಿಂದೂಗಳು ಪರಿಗಣಿಸುತ್ತಾರೆ. ಕಾಶಿ ನಗರದ ಮಧ್ಯಭಾಗದಲ್ಲಿ ಈ ಜ್ಯೋತಿರ್ಲಿಂಗವು ಸ್ಥಾಪಿತಗೊಂಡಿದೆ. ಈ ಲಿಂಗವು ಮೊಟ್ಟಮೊದಲ ಜ್ಯೋತಿರ್ಲಿಂಗ ಎಂದು ಪರಿಗಣಿಸಲ್ಪಟ್ಟಿದೆ. ಈ ಲಿಂಗವು ಭಗವಾನ್ ಶಿವನಿಗೆ ಅತ್ಯಂತ ಪ್ರಿಯವಾದುದು ಎಂದು ನಂಬಿಕೆಯಿದೆ. ಪುರಾಣಗಳ ಪ್ರಕಾರ ಪ್ರಲಯ ಕಾಲದಲ್ಲಿ ಇಡೀ ಭೂಮಿಯು ಮುಳುಗಿ ಹೋದರೂ ಕೂಡ, ವಾರಾಣಸಿಯನ್ನು ಶಿವನು ತನ್ನ ತ್ರಿಶೂಲದಿಂದ ಎತ್ತಿಹಿಡಿದನಂತೆ. ಇಲ್ಲಿ ಮರಣಹೊಂದುವವರು ಮೋಕ್ಷವನ್ನೇ ಪಡೆಯುತ್ತಾರೆ ಎಂಬ ದೃಢವಿಶ್ವಾಸವನ್ನು ಹಿಂದೂಗಳು ಇಟ್ಟುಕೊಂಡಿದ್ದಾರೆ. ಇಲ್ಲಿ ಸಾಯುವವರಿಗೆ ತಾರಕ ಮಂತ್ರವನ್ನು ಶಿವನೇ ಉಪದೇಶಿಸುತಾನೆ. ಈ ದೇವಸ್ಥಾನವನ್ನು ಹಲವಾರು ಸಲ ಕಟ್ಟಲಾಗಿದೆ. ಔರಂಗಜೇಬನ ಆಜ್ಞೆಯ ಪ್ರಕಾರ, ಇಲ್ಲಿನ ಮೂಲ ದೇವಸ್ಥಾನವನ್ನು ಕೆಡವಿ, ಅದರ ಸ್ಥಾನದಲ್ಲಿ ೧೬೬೯ರಲ್ಲಿ ಮಸೀದಿಯನ್ನು ನಿರ್ಮಿಸಲಾಯಿತು. ಈಗ ಇರುವ ಚಿಕ್ಕ ದೇವಸ್ಥಾನವನ್ನು ಇಂದೋರಿನ ರಾಣಿ ಅಹಲ್ಯಾದೇವಿ ಹೋಳ್ಕರ್ ಕಟ್ಟಿಸಿದಳು. ಈ ದೇವಸ್ಥಾನದ ಪಕ್ಕದಲ್ಲಿಯೇ ಜ್ಞಾನವಾಪಿ ಎನ್ನುವ ಬಾವಿಯಿದೆ. ಒಟ್ಟಾರೆ ಸಮಸ್ತ ಹಿಂದೂಗಳಿಗೂ ಅತ್ಯಂತ ಪವಿತ್ರವಾದ ನಗರ ವಾರಾಣಸಿ.




### ತ್ರ್ಯಂಬಕೇಶ್ವರ ಜ್ಯೋತಿರ್ಲಿಂಗ, ನಾಸಿಕ್, ಮಹಾರಾಷ್ಟ್ರ

ತ್ರ್ಯಂಬಕೇಶ್ವರ ಜ್ಯೋತಿರ್ಲಿಂಗವು ಮಹಾರಾಷ್ಟ್ರದ ನಾಸಿಕ ನಗರದಿಂದ ಮೂವತ್ತು ಕಿ.ಮೀ. ದೂರದಲ್ಲಿದೆ. ಈ ದೇವಸ್ಥಾನವು ಬ್ರಹ್ಮಗಿರಿ ಎನ್ನುವ ಪರ್ವತದ ಬಳಿಯಿದೆ. ಈ ಪರ್ವತದಿಂದಲೇ ಗೋದಾವರಿ ನದಿಯು ಹುಟ್ಟಿ ಹರಿಯುತ್ತದೆ. ಶಿವಪುರಾಣದ ಪ್ರಕಾರ, ಗೋದಾವರಿ ತಾಯಿ, ಗೌತಮ ಋಷಿಗಳು ಮತ್ತು ದೇವತೆಗಳು – ಇವರೆಲ್ಲರ ಪ್ರಾರ್ಥನೆಯ ಮೇರೆಗೆ ಶಿವನು ಇಲ್ಲಿ ಬಂದು ನೆಲೆಸಿದನು. ತ್ರ್ಯಂಬಕೇಶ್ವರ ಎಂಬ ನಾಮಧೇಯವನ್ನು ಪಡೆದುಕೊಂಡನು. ಇದಲ್ಲದೆ, ಇಲ್ಲಿನ ಒಂದು ಕೊಳದಲ್ಲಿಯೇ ವರುಣದೇವನ ಅನುಗ್ರಹದಿಂದ ಗೌತಮ ಋಷಿಯು ಎಣೆಯಿಲ್ಲದ ದವಸಧಾನ್ಯಗಳನ್ನು ಪಡೆದುಕೊಂಡನು. ಇತರ ದೇವತೆಗಳು ಆತನ ಬಗ್ಗೆ ಮಾತ್ಸರ್ಯಗೊಂಡರು. ಆ ಕಣಜದ ಹತ್ತಿರ ಒಂದು ಗೋವನ್ನು ಕಳಿಸಿದರು. ಗೌತಮ ಋಷಿಯಿಂದ ಆ ಹಸುವಿನ ಕೊಲೆಯು ಅಚಾನಕ್ಕಾಗಿ ಆಗಿಬಿಟ್ಟಿತು. ಗೌತಮ ಮುನಿಯ ಪ್ರಾರ್ಥನೆಯಿಂದ ಶಿವನು ಅಲ್ಲಿಗೆ ಗಂಗೆಯನ್ನು ಹರಿಸಿದನು. ಗಂಗಾಸ್ನಾನದಿಂದ ಗೌತಮ ಋಷಿಯು ಪಾಪವನ್ನು ಕಳೆದುಕೊಂಡು, ಪರಿಶುದ್ಧನಾದನು. ಇಲ್ಲಿ ಪ್ರಾರ್ಥಿಸಿಕೊಂಡರೆ ಅಭೀಷ್ಟಗಳು ಈಡೇರುತ್ತವೆ ಎಂದು ಭಕ್ತರು ನಂಬುತ್ತಾರೆ.



### ಕೇದಾರನಾಥ ಜ್ಯೋತಿರ್ಲಿಂಗ, ಉತ್ತರಾಖಂಡ

ಕೇದಾರನಾಥ ಜ್ಯೋತಿರ್ಲಿಂಗವು ಹಿಮಾಲಯ ಪರ್ವತ ಶಿಖರಗಳಲ್ಲಿ ಸಮುದ್ರಮಟ್ಟದಿಂದ ೧೨,೦೦೦ ಅಡಿಗಳಷ್ಟು ಎತ್ತರದಲ್ಲಿ ವಿರಾಜಮಾನವಾಗಿದೆ. ಹರಿದ್ವಾರ ನಗರದಿಂದ ಸುಮಾರು ೧೫೦ ಮೈಲುಗಳಷ್ಟು ದೂರದಲ್ಲಿದೆ. ವರ್ಷಕ್ಕೆ ಆರು ತಿಂಗಳುಗಳ ಕಾಲ ಇದು ತೆರೆದಿರುತ್ತದೆ. ಪೌರಾಣಿಕ ಕಥೆಗಳ ಪ್ರಕಾರ,



ಭಗವಾನ್ ವಿಷ್ಣುವಿನ ಅವತಾರಗಳಾದ ನರ ಮತ್ತು ನಾರಾಯಣರು ಶಿವನನ್ನು ಕುರಿತು ತಪಸ್ಯೆಯನ್ನು ಮಾಡಿದರು. ಇವರ ಭಕ್ತಿಗೆ ಪ್ರೀತನಾದ ಭಗವಾನ್ ಶಿವನು ಜ್ಯೋತಿರ್ಲಿಂಗ ರೂಪದಲ್ಲಿ ಕೇದಾರಕ್ಷೇತ್ರದಲ್ಲಿ ನೆಲೆಸಿದನು. ಇದು ಹಿಮಾಲಯದ ಚಾರ್ ಧಾಮ್ – ನಾಲ್ಕು ಪವಿತ್ರಧಾಮಗಳಲ್ಲಿ ಒಂದಾಗಿದೆ. ಭಕ್ತರು ಯಮುನೋತ್ರಿ ಮತ್ತು ಗಂಗೋತ್ರಿಗಳಿಂದ ಪವಿತ್ರಜಲವನ್ನು ತಂದು ಇಲ್ಲಿನ ಲಿಂಗಕ್ಕೆ ಅಭಿಷೇಕ ಮಾಡುವ ಸಂಪ್ರದಾಯವಿದೆ. ಇಲ್ಲಿಯೇ ಶ್ರೀಶಂಕರಾಚಾರ್ಯರು ತಮ್ಮ ದೇಹತ್ಯಾಗವನ್ನು ಮಾಡಿದರು ಎಂಬ ನಂಬಿಕೆ ಇದೆ. ಇಲ್ಲಿ ಅವರ ಸುಂದರವಾದ ಒಂದು ಪ್ರತಿಮೆಯು ಕೂಡ ಇದೆ.

### ಘೃಷ್ಣೇಶ್ವರ ಜ್ಯೋತಿರ್ಲಿಂಗ, ಸಂಭಾಜಿ ನಗರ, ಮಹಾರಾಷ್ಟ್ರ

ಈ ಜ್ಯೋತಿರ್ಲಿಂಗವು ವೇರುಲ್ ಎಂಬ ಗ್ರಾಮದಲ್ಲಿದೆ. ಈ ಗ್ರಾಮವು ಮಹಾರಾಷ್ಟ್ರದ ದೌಲತಾಬಾದಿಗಿಂತ ೨೦ ಕಿ.ಮೀ. ದೂರದಲ್ಲಿದೆ. ಈ ನಗರವು ಸಂಭಾಜಿ ನಗರದ (ಹಿಂದಿನ ಹೆಸರು ಔರಂಗಾಬಾದ್) ಹತ್ತಿರವಿದೆ. ಇದು ಪ್ರಸಿದ್ಧ ಅಜಂತಾ ಎಲ್ಲೋರಾ ಗುಹೆಗಳ ಹತ್ತಿರವೇ ಇದೆ. ಶಿವಪುರಾಣದ ಪ್ರಕಾರ, ಸುಧರ್ಮ ಮತ್ತು ಸುದೇಹಾ ಎಂಬ ದಂಪತಿಗಳು ಹತ್ತಿರದ ದೇವಗಿರಿ ಗುಡ್ಡದಲ್ಲಿ ನೆಲೆಸಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಹೀಗಾಗಿ ಸುಧರ್ಮನಿಗೆ ಆಕೆಯ ಹೆಂಡತಿಯಾದ ಸುದೇಹಾ, ತನ್ನ ತಂಗಿಯಾದ



ಘುಷ್ಮಳ ಜೊತೆಗೆ ಮದುವೆ ಮಾಡಿಸಿದಳು. ಘುಷ್ಮಳಿಗೆ ಒಬ್ಬ ಮಗ ಹುಟ್ಟಿದ. ಇದರಿಂದ ಹೊಟ್ಟೆಕಿಚ್ಚಿನಿಂದ ಕೆರಳಿದ ಸುದೇಹಾ ಮಗುವನ್ನು ಒಂದು ಸರೋವರಕ್ಕೆ ಎಸೆದಳು. ಘುಷ್ಮಳ ಪ್ರಾರ್ಥನೆಯಿಂದ ಶಿವನು ಪ್ರಸನ್ನನಾಗಿ ಮಗನನ್ನು ಬದುಕಿಸಿಕೊಟ್ಟನು. ಘುಷ್ಮ ಸುದೇಹಳಿಗೆ ಮೋಕ್ಷವನ್ನು ಕೊಡಬೇಕೆಂದು ಕೂಡ ಶಿವನನ್ನು ಪ್ರಾರ್ಥಿಸಿಕೊಂಡಳು. ಅವಳ ಈ ಉದಾರತೆಯಿಂದ ಪ್ರಸನ್ನನಾದ ಶಿವನು ಆ ಸ್ಥಳದಲ್ಲಿಯೇ ಜೋತಿರ್ಲಿಂಗದ ರೂಪದಲ್ಲಿ ಕಾಣಿಸಿಕೊಂಡನು. ಅಜಂತಾ-ಎಲ್ಲೋರಾ ಗುಹಾಲಯಗಳು ಹತ್ತಿರವೇ ಇರುವುದರಿಂದ, ಇವುಗಳನ್ನು ನೋಡಲು ಬರುವವರೆಲ್ಲರೂ, ಈ ಜ್ಯೋತಿರ್ಲಿಂಗದ ದರ್ಶನವನ್ನು ಕೂಡ ಪಡೆದುಕೊಳ್ಳುತ್ತಾರೆ.

### ಉಪಸಂಹಾರ

ಜ್ಯೋತಿರ್ಲಿಂಗಗಳು ಭಾರತದ ಅಖಂಡತೆಯ ಸಂಕೇತಗಳಾಗಿವೆ. ಭಗವಾನ್ ಶಿವನ ಚೈತನ್ಯರೂಪದ ಬೆಳಕಿನ ದ್ಯೋತಕಗಳಾಗಿವೆ. ಇವುಗಳ ದರ್ಶನದಿಂದ ಇಡೀ ಭಾರತವನ್ನೇ ಪ್ರದಕ್ಷಿಣೆ ಮಾಡಿಬಂದ ಹಾಗೆ ಆಗುತ್ತದೆ. ಇಂದಿಗೂ ಕಾಶಿಯಿಂದ ಗಂಗಾಜಲವನ್ನು ತೆಗೆದುಕೊಂಡು ಹೋಗಿ, ರಾಮೇಶ್ವರದ ಶಿವ ಲಿಂಗಕ್ಕೆ ಅಭಿಷೇಕ ಮಾಡುವ ಸಂಪ್ರದಾಯವಿದೆ.

ಇದಲ್ಲದೆ, ಶ್ರೀರಾಮಕೃಷ್ಣರ ತಂದೆ ಖುದಿರಾಮರು ಬಂಗಾಳದಿಂದ ರಾಮೇಶ್ವರದವರೆಗೆ ಪರ್ಯಟನ ಮಾಡಿದ್ದರು. ಶ್ರೀರಾಮಕೃಷ್ಣರು ದೇವಘರದ ವೈದ್ಯನಾಥ ಮತ್ತು ಕಾಶಿಯ ವಿಶ್ವನಾಥ ದೇಗುಲಗಳನ್ನು ಸಂದರ್ಶಿಸಿದ್ದರು. ಶ್ರೀಮಾತೆ ಶಾರದಾದೇವಿಯರು ಕೂಡ ಕಾಶಿ ಮತ್ತು ರಾಮೇಶ್ವರಗಳನ್ನು ಸಂದರ್ಶಿಸಿದರು. ಭಾರತದ ಉದ್ದಗಲಕ್ಕೂ ಸಂಚರಿಸಿದ ಸ್ವಾಮಿ ವಿವೇಕಾನಂದರು, ಕಾಶಿ, ರಾಮೇಶ್ವರ ಮುಂತಾದ ಹಲವು ಜ್ಯೋತಿರ್ಲಿಂಗಗಳ ದರ್ಶನವನ್ನು ಮಾಡಿದ್ದಾರೆ. ಅಮೆರಿಕೆಯಿಂದ ೧೮೯೭ರಲ್ಲಿ ಹಿಂತಿರುಗಿ ಬಂದ ಅವರು ರಾಮೇಶ್ವರದ ಭವ್ಯ ದೇಗುಲದಲ್ಲಿ ಇತಿಹಾಸ ಪ್ರಸಿದ್ಧ ಭಾಷಣವನ್ನು ಮಾಡಿದರು. ಲಿಂಗದ ರೂಪದಲ್ಲಿ ನಾವು ಮಾಡುವ ಶಿವಪೂಜೆಯನ್ನು ಮನುಷ್ಯರ ಸೇವೆಯ ಮೂಲಕವೂ ಮಾಡಬೇಕೆಂಬ ಸಂದೇಶವನ್ನು ನೀಡಿದರು. ✽

### ಕೇದಾರನಾಥನ ಪಾದಾರವಿಂದಗಳಲ್ಲಿ

ಕೇದಾರನಾಥ ದೇಗುಲವು ಒಂದು ದೊಡ್ಡ ಶಿಖರದ ಮಡಿಲಿನಲ್ಲಿದೆ; ಆ ಇಡೀ ಶಿಖರವು ನನ್ನೆದುರು ಈಗ ಅನಾವರಣಗೊಳ್ಳುತ್ತಿದೆ. ಉದಯಿಸುತ್ತಿರುವ ಸೂರ್ಯನಷ್ಟೇ ಪ್ರಕಾಶಮಾನವಾಗಿತ್ತು ಅದು. ಆ ಶಿಖರದ ಹಿಂದಿನಿಂದ ಹೊರಟು ಬರುತ್ತಿರುವ ಸಾವಿರಾರು ಮೃದುಸೂಕ್ಷ್ಮ ಕಿರಣಗಳು ನನ್ನನ್ನು ಆವರಿಸಿ ಪರವಶನನ್ನಾಗಿ ಮಾಡಿದವು. ಚಿರಂತನ ಕತ್ತಲೆಯ ಪ್ರಪಂಚವನ್ನು ಶಾಶ್ವತವಾಗಿ ಹಿಂದೆ ಬಿಟ್ಟು, ನಾನು ಚಿರಂತನ ಬೆಳಕಿನ ದಿವ್ಯಪ್ರಪಂಚಕ್ಕೆ ಬಂದಿರುವೆ ಎನ್ನಿಸಿತು. ಧವಳಕಾಂತಿಯ ಶಿಖರದೆಡೆಗೆ ಹೆಚ್ಚುಕಾಲ ದೃಷ್ಟಿಯಿಟ್ಟು ನೋಡಲಾರದಾದೆ. ಅಂತರ್ದೃಷ್ಟಿಗೆ ಪಕ್ವಾದ ನನ್ನ ಕಣ್ಣುಗಳಿಗೆ ಆ ಮಹಾ ಪರ್ವತಶಿಖರವು ಶಿವನ ಚಿರಂತನ ಅಮೂರ್ತ ಚಿಹ್ನೆಯಾಗಿ ತೋರಿತು. ಇದು ಕೇವಲ ಪರಿಕಲ್ಪನೆಯಲ್ಲ ; ದಿವ್ಯಾನುಭವ. ಇಡೀ ಹಿಮಾಲಯದಲ್ಲಿ ಇನ್ನೆಲ್ಲಿಯೂ ನೀವು ಶಿವನ ಇಂತಹ ದೇದೀಪ್ಯಮಾನವಾದ ರೂಪವನ್ನು ಕಾಣಲಾರಿರಿ. ನಾನು ಉತ್ತರಖಂಡದಲ್ಲಿ ಪ್ರವಾಸ ಮಾಡಿದ್ದೇನೆ; ಅತಿ ದುರ್ಗಮವಾದ ಅನೇಕ ಸ್ಥಳಗಳಿಗೆ ಭೇಟಿಕೊಟ್ಟಿದ್ದೇನೆ; ಆದರೆ ಪವಿತ್ರ ಕೇದಾರನಾಥಕ್ಕಿಂತ ಮಿಗಿಲಾದ ಯಾವುದನ್ನೂ ನಾನು ನೋಡಲಿಲ್ಲ.

*– ಸ್ವಾಮಿ ಅಖಂಡಾನಂದ (ಹಿಮಾಲಯದ ಮಡಿಲಲ್ಲಿ, ಪು.೧೧೪)*